# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ 703-2017** **ಸಿ. ಡಬ್ಲುಃ 08**

**ಪಿ. ಡಬ್ಲುಃ 06**

| | |
|---|---|
| ಸಾಕ್ಷಿದಾರರ ಹೆಸರು | ಶಂಕರಪ್ಪ |
| ತಂದೆಯ / ಗಂಡನ ಹೆಸರು | ಹನುಮಂತಯ್ಯ |
| ವಯಸ್ಸು | 59 ವರ್ಷ |
| ಕೆಲಸ | ಎ.ಎಸ್.ಐ ಹುಣಸೂರು ಪಟ್ಟಣ ಠಾಣೆ |
| ವಾಸ | ಹುಣಸೂರು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 29-03-2023** |

## ಮುಖ್ಯ ವಿಚಾರಣೆಃ  ಶ್ರೀ ಎಪಿಪಿ  ವಕೀಲರಿಂದಃ

ನಾನು ಜನವರಿ 2017 ರಿಂದ 2019 ರವರೆಗೆ ನಂಜಗೂಡಿನ ಪಟ್ಟಣ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.04-04-2017 ರಂದು ಮಧ್ಯಾಹ್ಣ 3.15 ಗಂಟೆಯಲ್ಲಿ ನಾನು ಠಾಣೆಯಲ್ಲಿ ಇರುವಾಗ ನ್ಯಾಯಾಲಯದ ಪಿ.ಸಿ.162 ಗೋಪಾಲಸ್ವಾಮಿ ರವರು ನ್ಯಾಯಾಲಯವು ಅಸಂಜ್ಞೆ ಅಪರಾಧ ಸಂಬಂಧ ಚಾಸಾ-9 ರವರು ನೀಡಿದ ಮನವಿಯನ್ನು ಪುರಸ್ಕರಿಸಿ ನ್ಯಾಯಾಲಯವು ಆರೋಪಿತರ ವಿರುದ್ಧ ಪ್ರಕರಣವನ್ನು ದಾಖಲಿಸುವಂತೆ ನೀಡಿದ ಅನುಮತಿ ಆದೇಶವನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂ.109/2017 ಭಾ.ದಂ.ಸಂ ಕಲಂ.171 ಬಿ ಮತ್ತು ಇ ರೀತ್ಯಾ ಪ್ರ.ವ.ವ ಅನ್ನು ದಾಖಲಿಸಿ ಮೇಲಾಧಿಕಾರಿಗಳಿಗೆ ಹಾಗೂ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದಿಂದ ಆರೋಪಿಗಳ ವಿರುದ್ಧ ಪ್ರ.ವ.ವ ಅನ್ನು ದಾಖಲು ಮಾಡಲು ಪಡೆದ ಅನುಮತಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು, ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ನಂತರ ಸಾಕ್ಷಿದಾರರಾದ ಚಾಸಾ- 2 ರಿಂದ 4 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತೇನೆ.  ಸಾಕ್ಷಿ ಪ್ರ.ವ.ವ ಅನ್ನು ನೋಡಿ ಗುರುತಿದ್ದು ಅದನ್ನು ನಿಪಿ-9 ಎಂದು ಸಾಕ್ಷಿ ಸಹಿಯನ್ನು ನಿಪಿ-9(ಎ)

ಎಂದು ಗುರುತಿಸಲಾಯಿತು. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-9 ರವರಿಗೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಪಿ ವಕೀಲರಿಂದಃ</u>**

ದಿ.04-04-2017 ರಲ್ಲಿ ನಾನು ಠಾಣಾಧಿಕಾರಿಯಾಗಿದ್ದೆನು. ಈ ಪ್ರಕರಣವನ್ನು ತನಿಖೆ ಮಾಡಲು ನನಗೆ ನಿರ್ದೇಶನ ನೀಡಿದವರು ಪಿ.ಎಸ್.ಐ ರವರು. ನನಗೆ ಯಾವುದೇ ಪ್ರ.ವ.ವ ಬಂದಿರಲಿಲ್ಲ, ನ್ಯಾಯಾಲಯದಿಂದ ತಂದ ಆದೇಶವನ್ನು ಹಾಜರುಡಿಸಿದ ಮೇರೆಗೆ ನಾನು ಪ್ರ.ವ.ವ ಅನ್ನು ದಾಖಲು ಮಾಡಿರುತ್ತೇನೆ. ದೂರಿನಲ್ಲಿ ಇದ್ದ ಅಂಶಗಳನ್ನು ಪರಿಶೀಲನೆ ಮಾಡಿದ ನಂತರ ನಿಪಿ-9 ರಂತೆ ಪ್ರ.ವ.ವ ದಾಖಲು ಮಾಡಿರುತ್ತೇನೆ. ಪ್ರ.ವ.ವ ದಾಖಲಾದ ನಂತರ ನಾನೇ ಪಿ.ಎಸ್.ಐ ರವರ ಆದೇಶದಂತೆ ಈ ಪ್ರಕರಣದ ತನಿಖೆಯನ್ನು ಕೈಗೊಂಡಿರುತ್ತೇನೆ. ಪ್ರ.ವ.ವ ದಲ್ಲಿ ಸಂಶಾಯಾಸ್ಪದವಾಗಿ ಹಣ ಸಾಗಾಣಿಕೆ ಆಗುತ್ತಿತ್ತು ಎಂಬ ಬಗ್ಗೆ ಉಲ್ಲೇಖ ಇದೆ ಎಂದರೆ ಸರಿ. ನಾನು ತನಿಖಾಧಿಕಾರಿಯಾಗಿ ದೂರಿನಲ್ಲಿ ಉಲ್ಲೇಖವಾದ ಹಣ ಯಾರಿಗೆ ಸೇರಿದ್ದು ಎಂಬುದನ್ನು ಪರಿಶೀಲಿಸುವ ಸಲುವಾಗಿ ನೋಟಿಸ್ ನೀಡಿರುವುದಿಲ್ಲ. ನಾನು ಸಿ.ಡಿ ಯ ಒಂದನೇ ಭಾಗದವರೆಗೆ ಮಾತ್ರ ತನಿಖಾಧಿಕಾರಿಯಾಗಿ ಮುಂದುವರೆದಿರುತ್ತೇನೆ. ನಾನು ಹೇಳಿಕೆ ಪಡೆದಿರುವ ಚಾಸಾ-2 ರಿಂದ 4 ರವರು ನನ್ನ ಮೇಲಾಧಿಕಾರಿಗಳು ಎಂದರೆ ಸರಿ. ನಾನು ಚಾಸಾ-2 ರಿಂದ 4 ರವರ ಹೇಳಿಕೆಗಳನ್ನು ಮಾತ್ರ ಪಡೆದಿರುತ್ತೇನೆ. ನಾನು ಹೇಳಿಕೆ ಪಡೆಯುವ ಪೂರ್ವದಲ್ಲಿ ಚಾಸಾ-2 ರಿಂದ 4 ರವರ ವಿಚಾರಣೆಯನ್ನು ಮಾಡಿರುತ್ತೇನೆ. ನನ್ನ ಉಕ್ತಲೇಖನದ ಮೇರೆಗೆ ಚಾಸಾ-2 ರಿಂದ 4 ರವರ ಹೇಳಿಕೆಗಳು ದಾಖಲು ಮಾಡಲಾಗಿರುತ್ತದೆ. ಚಾಸಾ-2 ರಿಂದ 4 ರವರು ತಾವು ದಾಳಿ ಮಾಡುವ ಸಮಯ ಎಸ್.ಪಿ ರವರು ಇದ್ದರು ಎಂದು ನನಗೆ ತಿಳಿಸಿರುವುದಿಲ್ಲ. ಇಂಡೆಂಟ್ ಅನ್ನು ಆರೋಪಿಗಳು ತೋರಿಸಿದ ಬಗ್ಗೆ ಚಾಸಾ-2 ರಿಂದ 4 ರವರ ಬಳಿ ಮಾಹಿತಿಯನ್ನು ಕಲೆಹಾಕಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗಳನ್ನು ದಸ್ತಗಿರಿ ಮಾಡಿ ಹಣವನ್ನು ಕಲೆಹಾಕಿದ ಸಮಯ ವಿಡಿಯೋ ಚಿತ್ರೀಕರಣ ಮಾಡಲಾಗಿತ್ತೆ ಎಂಬುದರ ಬಗ್ಗೆ ನನಗೆ ಮಾಹಿತಿ ನೀಡಿರುವುದಿಲ್ಲ. ಚಾಸಾ-2 ರಿಂದ 4 ರವರ ಹೇಳಿಕೆಯ ಪ್ರಕಾರ ಒಂದು ಕಬ್ಬಿಣದ ಪೆಟ್ಟಿಗೆಯಲ್ಲಿ ಬಂದೋಬಸ್ತ್ ಗಾಗಿ ಇಡಲಾದ ಹಣವನ್ನು ಜಪ್ತು ಮಾಡಲಾಗಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಚಾಸಾ-2 ರಿಂದ 4 ರವರು ಆರೋಪಿತರ ಜೊತೆ ಇದ್ದ ಗನ್‌ಮ್ಯಾನ್ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ನನ್ನ ತನಿಖಾ ಕಾಲದಲ್ಲಿ ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಳ್ಳಲಾದ ಹಣವು ಒಂದು ನಿರ್ದಿಷ್ಟ ವ್ಯಕ್ತಿ ಮತ್ತು ಪಕ್ಷಕ್ಕೆ

ಸೇರಿದ್ದು ಎಂದು ನಾನು ತನಿಖೆ ಮಾಡುವ ಸಮಯ ತಿಳಿದುಬಂದಿರುವುದಿಲ್ಲ. ನನ್ನ ಮೇಲಾಧಿಕಾರಿಗಳ ಆದೇಶದ ಮೇರೆಗೆ ಆರೋಪಿತರ ವಿರುದ್ಧ ಪ್ರ.ವ.ವ ಅನ್ನು ದಾಖಲಿಸಿ ತನಿಖೆ ಕೈಗೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಪ್ಪು ತನಿಖೆಯಿಂದ ಸಾರ್ವಜನಿಕರ ಹಣ ಮತ್ತು ಸಮಯ ವ್ಯರ್ಥವಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮುಂದೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಾಖಲೆಗಳನ್ನು ಹಾಜರುಪಡಿಸುವಂತೆ ನಾನು ಯಾವುದೇ ನೋಟಿಸ್ ನೀಡಿರುವುದಿಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**